| 7 | 300-ಮೈವಿವಿ ಕಾರ್ಯಕ್ರಮಗಳು/ಫ್ರೆಷರ್ಸ್ ಡೇ/ಇತರೆ ಕಾರ್ಯಗಾರ | -/- | 3,00,000/- | 3,00,000/- |
| | | | ಒಟ್ಟು | **80,00,000/-** |
| | **ಮರು ಹೊದಾಣಿಕೆ** | | | |
| 1 | 352- ಇನ್‌ಫ್ರಾಸ್ಟಕ್ಚರ್ ಪ್ರಾವಿಷನ್ಸ್ | 2,00,00,000/- | 1,20,00,000/- | **80,00,000/-** |

ಮೇಲ್ಕಂಡಂತೆ ವಿಶ್ವವಿದ್ಯಾನಿಲಯದ ವಿಭಾಗ/ಕಛೇರಿಗಳು ಕೋರಿರುವಂತೆ ಅಗತ್ಯಕ್ಕೆ ತಕ್ಕಂತೆ 2022-23ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಣೆ ಮಾಡಲಾಗಿರುವ ವಿಷಯವನ್ನು **"ಹಣಕಾಸು ಸಮಿತಿ"** ಸಭೆಯ ಅವಗಾಹನೆಗಾಗಿ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ. ಅದರಂತೆಯೇ, ಸದರಿ ವಿಷಯವನ ಮತ್ತು **"ಸಿಂಡಿಕೇಟ್"** ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

Subject No. 2023/2.19 

ವಿಷಯ: ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜಿನ ಕ್ರೀಡಾ ಮೈದಾನದ ಮುಂಭಾಗದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿಯನ್ನು ನಿರ್ಮಿಸಲು ಅವಶ್ಯವಿರುವ 20X20 ಅಡಿ ಜಾಗವನ್ನು ನೀಡುವ ಬಗ್ಗೆ.

ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮೈಸೂರು ಇವರು ತಮ್ಮ ಪತ್ರದಲ್ಲಿ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜಿನ ಕ್ರೀಡಾ ಮೈದಾನದ ಮುಂಭಾಗದಲ್ಲಿನ ಸೂಕ್ತ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿಯನ್ನು ನಿರ್ಮಾಣ ಮಾಡಲು ಅವಶ್ಯವಿರುವ 20X20 ಅಡಿ ಅಳತೆಯ ಜಾಗವನ್ನು ನೀಡುವಂತೆ ಕೋರಿರುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜಿನ ಕ್ರೀಡಾ ಮೈದಾನದ ಮುಂಭಾಗದಲ್ಲಿ ಸೂಕ್ತ ಸ್ಥಳವಕಾಶವನ್ನು ಕಲ್ಪಿಸುವ ಸಂಬಂಧ ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಹಾಗೂ ಪಾರಂಪರಿಕ ಕಟ್ಟಡಗಳ ನಿಯಮವನ್ನು ಪರಿಗಣಿಸಿ ವರದಿ ಸಲ್ಲಿಸುವಂತೆ ಕಾರ್ಯಪಾಲಕ ಅಭಿಯಂತರರು, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ಮಹಾನಗರ ಪಾಲಿಕೆ ಮತ್ತು ಕೆ.ಆರ್.ಸಂಚಾರ ಪೊಲೀಸ್ ಠಾಣೆ ವಿಭಾಗಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸುವಂತೆ ತಿಳಿಸಿ ಪತ್ರ ಬರೆಯಲಾಗಿತ್ತು. (ಪ್ರತಿ ಲಗತ್ತಿಸಿದೆ)

ಅದರಂತೆ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಹಾಗೂ ವಿವಿಧ ಇಲಾಖೆಗಳಿಂದ ಈ ಕೆಳಕಂಡಂತೆ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.

**<u>ಮಹಾನಗರ ಪಾಲಿಕೆಯ ಅಭಿಪ್ರಾಯ:</u>**

ವಿಶ್ವವಿದ್ಯಾನಿಲಯದ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜು ಕ್ರೀಡಾ ಮೈದಾನದ ಮುಂಭಾಗದ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸಲು ಅವಶ್ಯವಿರುವ 20X20 ಚದರ ಅಡಿ ಜಾಗವನ್ನು ಒದಗಿಸುವ ಸಂಬಂಧ ಸ್ಥಳ ಪರಿಶೀಲಿಸಲಾಗಿ ಮಹಾ-ಯೋಜನೆ 2031ರನ್ವಯ ಸದರಿ ಸ್ವತ್ತು ಉದ್ಯಾನವನ ಮತ್ತು ಬಯಲು ಪ್ರದೇಶ ವಲಯಕ್ಕೆ ಭೂ ಉಪಯೋಗವನ್ನು ಕಾಯ್ದಿರಿಸಲಾಗಿದೆ. ವಲಯ ನಿಯಮಾವಳಿಯ ಪುಟ ಸಂಖ್ಯೆ 51ರ ಕ್ರಮ ಸಂಖ್ಯೆ 6.14.2.ಬಿ ರನ್ವಯ ಬಯಲು ಪ್ರದೇಶದ ಒಟ್ಟು ವಿಸ್ತೀರ್ಣದ ಶೇ.5%ರಷ್ಟು ಮೀರದಂತೆ ಹಾಲಿನ ಬೂತ್ ನಿರ್ಮಿಸಲು ಅವಕಾಶವಿರುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ.

**<u>ಪೊಲೀಸ್ ನಿರೀಕ್ಷಕರು, ಕೆ.ಆರ್.ಸಂಚಾರ ಪೊಲೀಸ್ ಠಾಣೆ, ಮೈಸೂರು</u>**

ಕೆ.ಆರ್.ಸಂಚಾರ ಪೊಲೀಸ್ ಠಾಣೆಯ ಏಕಲವ್ಯ ವೃತ್ತದಿಂದ ಕೌಟಿಲ್ಯ ವೃತ್ತದ ಕಡೆಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜು ಕ್ರೀಡಾ ಮೈದಾನದ ಮುಂಭಾಗದ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸಲು ಮತ್ತು ಕೆ.ಆರ್.ಬಿ ರಸ್ತೆಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ಅಡಚಣೆಯಾಗದಂತೆ ನಿಬಂಧನೆಗಳಿಗೊಳಪಟ್ಟು ಷರತ್ತು ಬದ್ಧ ಅನುಮತಿ ನೀಡಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

→

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಈ ಸಂಬಂಧ ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಮೈದಾನದ ಮುಂಭಾಗದಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸುವುದರಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ, ಬೋಧಕ ಸಿಬ್ಬಂದಿಗಳಿಗೆ, ಕಛೇರಿ ಸಿಬ್ಬಂದಿಗಳಿಗೆ ಹಾಗೂ ವಿಭಾಗದ ವತಿಯಿಂದ ಆಯೋಜಿಸುವ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ ಅಲ್ಲದೆ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರು ಕೂಡ ಇದರ ಉಪಯೋಗವನ್ನು ಪಡೆದುಕೊಳ್ಳಬಹುದೆಂದು ಅಭಿಪ್ರಾಯಿಸಿರುತ್ತಾರೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಮೈಸೂರು ಮಹಾನಗರ ಪಾಲಿಕೆ, ಕೆ.ಆರ್.ಸಂಚಾರ ಪೊಲೀಸ್ ಠಾಣೆ ಮತ್ತು ದೈಹಿಕ ಶಿಕ್ಷಣ ವಿಭಾಗ ಇವರುಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗಿದ್ದು, ಅದರ ಅನ್ವಯ ವಿಶ್ವವಿದ್ಯಾನಿಲಯ ವಿಧಿಸುವ ಷರತ್ತು/ನಿಬಂಧನೆಗಳಿಗೊಳಪಟ್ಟು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವುದರಿಂದ ಅವಶ್ಯವಿರುವ 20X20 ಅಡಿ ಜಾಗದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ನಿರ್ಮಿಸುವ ಸಂಬಂಧ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ
**ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್ , ಮೈಸೂರು-05**

ಸಂಖ್ಯೆ:- ದೈ.ಶಿ.ವಿ/ 749 /2022-23 ದಿನಾಂಕ:-25.01.2023

ಗೆ,

ಕುಲಸಚಿವರು,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಮಾನ್ಯರೆ,

ವಿಷಯ:- ನಂದಿನಿ ಉತ್ಪನಗಳನ್ನು ಮಾರಾಟಮಾಡಲು ಮಿನಿ ಗ್ಯಾಲಕ್ಷಿ ಸ್ಥಾಪಿಸುವ ಸಂಬಂಧ ಅಭಿಪ್ರಾಯ ನೀಡುತ್ತಿರುವ ಬಗೆಗೆ.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ:-ಜಿಎಲ್7/540/2007-08, ದಿನಾಂಕ:-21.01.2023.

*****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜು ಕ್ರೀಡಾ ಮೈದಾನದ ಮುಂಭಾಗದ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸಲು ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮೈಸೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಅಭಿಪ್ರಾಯವನ್ನು ತಿಳಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತೀರಿ.

ಈ ಸಂಬಂಧ ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಮೈದಾನದ ಮುಂಭಾಗದಲ್ಲಿ ನಂದಿನಿ ಹಾಲು ಮತ್ತು ಉತ್ಪನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸುವುದರಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ, ಬೋಧಕ ಸಿಬ್ಬಂದಿಗಳಿಗೆ, ಕಛೇರಿ ಸಿಬ್ಬಂದಿಗಳಿಗೆ ಹಾಗೂ ವಿಭಾಗದ ವತಿಯಿಂದ ಆಯೋಜಿಸುವ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ ಅಲ್ಲದೆ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರು ಕೂಡ ಇದರ ಉಪಯೋಗವನ್ನು ಪಡೆದುಕೊಳ್ಳಬಹುದು ಎಂಬ ಮಾಹಿತಿಯನ್ನು ತಮ್ಮ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
25/1/2023

ನಿರ್ದೇಶಕರು

**ನಿರ್ದೇಶಕರು**
**ದೈಹಿಕ ಶಿಕ್ಷಣ ವಿಭಾಗ**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು - 570 005**

Registrar Personal Section
RP 1580
Dt 30/1/23
University of Mysore

27 -163-

ಸಂ/ಕೆ.ಆರ್.ಸಂ/ಸಿಸಿ/ /2023.

ಪೊಲೀಸ್ ನಿರೀಕ್ಷಕರು
ಕೆ.ಆರ್.ಸಂಚಾರ ಪೊಲೀಸ್ ಠಾಣೆ
ಮೈಸೂರು ನಗರ
ದಿನಾಂಕ: 28.01.2023

ಕುಲಸಚಿವರ ಕಛೇರಿ
ಮೈ. ವಿ. ವಿ ಮೈಸೂರು
ಒಳಬಂದ ಸಂ. m-3077
ದಿ. 31/1/23

**ರವರಿಗೆ,**

ಮಾನ್ಯ ಕುಲಸಚಿವರು
ವಿಶ್ವವಿದ್ಯಾಲಯ ಕಾರ್ಯಸೌಧ
ಕ್ರಾಫರ್ಡ್ ಭವನ ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570005.

**ಮಾನ್ಯರೆ,**

**ವಿಷಯ** :- ನಂದಿನಿ ಹಾಲು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸುವ ಸಂಬಂಧ ನಿರಾಕ್ಷೇಪಣಾ ಪತ್ರ ನೀಡಿರುವ ಬಗ್ಗೆ.

**ಉಲ್ಲೇಖ**;- ಸಂಖ್ಯೆ:ಜಿ.ಎಲ್.7/540/2007-08. ದಿನಾಂಕ 21.01.2023

FO
GL7
31/1/23
31/1/23

--***--

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಾನ್ಯರಲ್ಲಿ ಈ ಮೂಲಕ ನಿವೇದಿಸಿಕೊಳ್ಳುವುದೇನೆಂದರೆ, ಮೈಸೂರು ವಿಶ್ವವಿದ್ಯಾನಿಲಯದ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜು ಕ್ರೀಡಾ ಮೈದಾನದ ಮುಂಭಾಗದ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸಲು ಅವಶ್ಯವಿರುವ 20*20 ಚ.ಅಡಿ ಜಾಗವನ್ನು ಒದಗಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ಕೋರಿದ್ದು, ಈ ಸಂಬಂಧ ಸದರಿ ಸ್ಥಳ ಪರಿಶೀಲಿಸಿ ನಿರಾಕ್ಷೇಪಣಾ ಪತ್ರ ಸಲ್ಲಿಸುವಂತೆ ಕೋರಿರುವುದು ಸರಿಯಷ್ಟೆ.

ಕೆ.ಆರ್ ಸಂಚಾರ ಪೊಲೀಸ್ ಠಾಣೆಯ ಏಕಲವ್ಯ ವೃತ್ತದಿಂದ ಕೌಟಿಲ್ಯ ವೃತ್ತದ ಕಡೆಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜು ಕ್ರೀಡಾ ಮೈದಾನದ ಮುಂಭಾಗದ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲಕ್ಸಿ ಸ್ಥಾಪಿಸಲು ಮತ್ತು ಕೆ.ಆರ್.ಬಿ ರಸ್ತೆಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ಅಡಚಣೆಯಾಗದಂತೆ ನಿಬಂಧನೆಗಳಿಗೊಳಪಟ್ಟು ಷರತ್ತು ಬದ್ಧ ಅನುಮತಿ ನೀಡಬಹುದಾಗಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಧೇಯ,

(ಡಿ.ಮಂಜುನಾಥ್)
ಪೊಲೀಸ್ ನಿರೀಕ್ಷಕರು
ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆ
ಲಕ್ಷ್ಮೀಪುರಂ, ಮೈಸೂರು

-164-

ಕುಲಸಚಿವರ ಕಛೇರಿ
ಮೈ. ವಿ. ವಿ ಮೈಸೂರು
ಇಂದ ಸಂ. m-3140
ತಾ. 4/02/2023

# ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಮೈನಪಾ/ವ.ಆ/ ಅ.ಅ/478/ :2022-23

ವಲಯ ಆಯುಕ್ತರವರ ಕಛೇರಿ
ವಲಯ ಕಛೇರಿ - 03
ಶಾರದಾದೇವಿ ನಗರ, ಮೈಸೂರು
ದಿನಾಂಕ :02-02-2023

ಗೆ.
ಕುಲ ಸಚಿವರು,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಮಾನ್ಯರೆ.

ವಿಷಯ :- ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಲು ಮಿನಿ ಗ್ಯಾಲ್ಯಾಕ್ಸಿ ಸ್ಥಾಪಿಸುವ ಸಂಬಂಧ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ :- 1.ತಮ್ಮ ಪತ್ರದ ಸಂಖ್ಯೆಜಿ.ಎಲ್ 7/540/2007-08 ದಿನಾಂಕ : 21.01.2023.

** ** ** *

EO

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದ ಕೃಷ್ಣರಾಜ ಬುಲೇವಾರ್ಡ್ ರಸ್ತೆಗೆ ಅಭಿಮುಖವಾಗಿರುವ ಮಹಾರಾಜ ಕಾಲೇಜು ಕ್ರೀಡಾ ಮೈದಾನದ ಮುಂಭಾಗದ ಸ್ಥಳದಲ್ಲಿ ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ಮಿನಿ ಗ್ಯಾಲ್ಯಾಕ್ಸಿ ಸ್ಥಾಪಿಸಲು ಅವಶ್ಯವಿರುವ 20 * 20 ಚದರ ಅಡಿ ಜಾಗವನ್ನು ಒದಗಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೋರಿರುವ ಮೇರೆಗೆ ಸ್ಥಳ ಪರಿಶೀಲಿಸಿ ಸಾರ್ವಜನಿಕರಿಗೆ ತೊಂದರೆಯಾಗುವ ಬಗ್ಗೆ ಪರಿಶೀಲಿಸಿ ನಿರಾಕ್ಷೇಪಣಾ ಪತ್ರ ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತೀರಿ.

ಈ ಸಂಬಂಧ ಸ್ಥಳಪರಿಶೀಲಿಸಲಾಗಿ ಮಹಾ-ಯೋಜನೆ 2031ರನ್ವಯ ಸದರಿ ಸ್ವತ್ತು ಉದ್ಯಾನವನ ಮತ್ತು ಬಯಲು ಪ್ರದೇಶ ವಲಯಕ್ಕೆ ಭೂಉಪಯೋಗವನ್ನು ಕಾಯ್ದಿರಿಸಲಾಗಿದೆ. ವಲಯ ನಿಯಾಮಾವಳಿಯ ಪುಟ ಸಂಖ್ಯೆ 51ರ ಕ್ರಮಸಂಖ್ಯೆ 6.14.2.ಬಿ ರನ್ವಯ ಮಹಾರಾಜ ಬಯಲು ಪ್ರದೇಶದ ಒಟ್ಟು ವಿಸ್ತೀರ್ಣದ ಶೇ 5% ರಷ್ಟು ಮೀರದಂತೆ ಹಾಲಿನ ಬೂತ್ ನಿರ್ಮಿಲು ಅವಕಾಶವಿರುತ್ತದೆ ಎಂಬ ಅಂಶವನ್ನು ನಗರಯೋಜನಾಧಿಕಾರಿಗಳು ಸ್ಪಷ್ಟಪಡಿಸಿರುತ್ತಾರೆ.

ಅದರಂತೆ, ಮಹಾರಾಜ ಬಯಲು ಪ್ರದೇಶದ ಒಟ್ಟು ವಿಸ್ತೀರ್ಣದ ಶೇ 5% ರಷ್ಟು ಮೀರದಂತೆ ಷರತ್ತು ವಿಧಿಸಿ ಹಾಲಿನ ಬೂತ್ ನಿರ್ಮಿಸಲು ಈ ನಿರಾಕ್ಷೇಪಣಾ ಪತ್ರವನ್ನು ನೀಡಿದೆ.

(ಸಹಿ)
ವಲಯ ಆಯುಕ್ತರು
ವಲಯ ಕಛೇರಿ-3
ಮೈಸೂರು ಮಹಾನಗರ ಪಾಲಿಕೆ
ಮೈಸೂರು ಮಹಾನಗರ ಪಾಲಿಕೆ

## 6.14 PARKS AND OPEN SPACE (P)

### 6.14.1 Description

The natural and manmade features meant for environmental conservation and preservation, including water bodies, forests and drains; parks, playgrounds, burial grounds and crematoria.

### 6.14.2 Regulations

**1. Permissible land uses**

a. Uses permissible include: Sports grounds, stadium, playgrounds, parks, swimming pools, cemeteries, garden land, social forests and crematoria.

b. **Uses permissible under special circumstances by the authority**: Open air theatres, indoor recreational uses, dwelling for watch and ward, sports clubs, and libraries, milk booths, HOPCOMS run by the concerned dept. only. The area of such use shall not exceed 5% of the total area and shall not be more than G+1 floor in any case with required parking facilities,

c. Setbacks for the above will be decided by the Authority taking into account the surrounding development and traffic scenario in that area.

d. Parks, Playgrounds & open spaces may be permitted in all other landuse zones, as permissible use.

**2. Valley**

Within the demarcated buffer for the valley the following uses are allowed:

a. Sewerage Treatment Plants and Water treatment plants

b. Roads, pathways, formation of drains, culverts, bridges, etc which will not obstruct the water course, run offs, channels.

c. In case of water bodies a 30.0 m buffer of 'no development zone' is to be maintained around the lake (as per revenue records) with exception of activities associated with lake and this buffer may be taken into account for reservation of park while sanctioning plans.

d. If the valley portion is a part of the layout/ development plan, then that part of the valley zone could be taken into account for reservation of parks and open spaces both in development plan and under subdivision regulations subject to fulfilling section 17 of KT&CP Act, 1961 and sec 32 of KUDA Act, 1987.

e. Any land falling within the valley for which permission has been accorded either by the Authority or Government, and then such permission shall be valid irrespective of the land use classification in the RMP 2031. Fresh permissions for developments shall not be accorded in valley zone.

f. No development what so ever, whether by filling or otherwise, shall be carried out within 45 meters from the boundary of the bank of Kabini River Where there is no river embankment, within 30metres or such distance as may be prescribed under any other general or specific orders of government or appropriate authority, whichever is more.


**NOTE:**

**1. Valley**

•The valleys have been categorized into 3 types namely primary, secondary and tertiary. These drains will have a buffer of 12mt, 9mt and 6mt (measured from the edge of the valley) respectively on either side. These classifications have been used for the valleys newly identified while finalizing the RMP 2031. In case the buffer has not been marked due to cartographical error for any of the above types of drains, then based on the revenue records buffer shall be insisted in all such cases without referring the land use plan while according approval for building/development/ layout plan. Permissions in sensitive areas earmarked on the land use plan shall be considered only by the planning Authority.

2. Under any circumstances area earmarked for parks/valley/drains cannot be converted to any other uses.

"LAY OUT PLAN"




A.R.

ಸಹಾಯಕ ಅಭಿಯಂತರರು
ನಾಗರೀಕ ಸೇವಾ ಕೇಂದ್ರ
ವಲಯ ಕಛೇರಿ-3
ಮೈಸೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು
ನಾಗರೀಕ ಸೇವಾ ಕೇಂದ್ರ
ವಲಯ ಕಛೇರಿ-3
ಮೈಸೂರು ಮಹಾನಗರ ಪಾ
ಮೈಸೂರು

ಅಭಿವೃದ್ಧಿ ಅಧಿಕಾರಿ
ನಾಗರೀಕ ಸೇವಾ ಕೇಂದ್ರ
ವಲಯ ಕಛೇರಿ - 3
ಮೈಸೂರು ಮಹಾನಗ

Subject No. 2023/2.20 

**ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯ ಸಂಬಂಧ ಕರಡು ಅಧಿನಿಯಮಕ್ಕೆ ಅನುಮೋದನೆ ಕೋರುವ ಬಗ್ಗೆ.**

*****

ಮೈಸೂರು ವಿಶ್ವವಿದ್ಯಾನಿಲಯದ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯ ಸಂಬಂಧ ಕರಡು ಅಧಿನಿಯಮಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ-1), ಬೆಂಗಳೂರು ಇವರು ದಿನಾಂಕ 04.07.2022ರ ತಮ್ಮ ಪತ್ರದಲ್ಲಿ, ಮೈಸೂರು ವಿಶ್ವವಿದ್ಯಾನಿಲಯವು ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸ್ಥಾಪನೆ ಕುರಿತಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 41ರನ್ವಯ "Establishment of Planning, Monitoring and Evaluation Board (Constitution, Responsibilities and Functions) in the University of Mysore ಕರಡು ಅಧಿನಿಯಮವನ್ನು ಪ್ರಸ್ತುತ ಇರುವ ಯು.ಜಿ.ಸಿ. ಮಾರ್ಗಸೂಚಿಗಳನ್ವಯ ರಚಿಸಿ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಅಧಿನಿಯಮ ಸಮಿತಿಯ ಅಧ್ಯಕ್ಷರಾದ ಪ್ರೊ. ಡಿ. ಆನಂದ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ 21-09-2022ರಂದು ನಡೆದ ಸಭೆಯಲ್ಲಿ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸ್ಥಾಪನೆಯ ಸಂಬಂಧದ ಕರಡು ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 41ರನ್ವಯ ಕೆಲವು ಮಾರ್ಪಾಡುಗಳನ್ನು ಮಾಡಿ, ಕರಡು ಅಧಿನಿಯಮವನ್ನು ಸಿದ್ದಪಡಿಸಲಾಗಿದ್ದು, ಈ ಕರಡು ಅಧಿನಿಯಮವನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಘನತ್ತೆವೆತ್ತ ರಾಜ್ಯಪಾಲರ ಅನುಮೋದನೆ ದೊರಕಿಸಿಕೊಡುವಂತೆ ಕೋರಿ ಘನ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಕರಡು ಅಧಿನಿಯಮವನ್ನು ದಿನಾಂಕ 23.09.2022ರಂದು ನಡೆದ ಶೈಕ್ಷಣಿಕ ಮಂಡಳಿ ಹಾಗೂ ದಿನಾಂಕ 26.09.2022ರಂದು ನಡೆದ ಹಣಕಾಸು ಸಮಿತಿ ಸಭೆಗಳಲ್ಲಿ ವಿಷಯ ಮಂಡಿಸಲಾಗಿ, ಸದರಿ ಸಭೆಗಳಲ್ಲಿ ಈ ಕರಡು ಅಧಿನಿಯಮವನ್ನು ಅನುಮೋದಿಸಲಾಗಿರುತ್ತದೆ. ಪ್ರಸ್ತುತ, ಮೈಸೂರು ವಿಶ್ವವಿದ್ಯಾನಿಲಯದ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಕರಡು ಅಧಿನಿಯಮವನ್ನು (ಅನುಬಂಧ-ಅ)ನಲ್ಲಿ ದಿನಾಂಕ:20.10.2022, ದಿನಾಂಕ:05.11.2022 ಹಾಗೂ ದಿನಾಂಕ:09.12.2022ರಂದು ನಡೆದ ಸಿಂಡಿಕೇಟ್ ಸಭೆಗೆ ಮಂಡಿಸಿದ್ದು, ದಿನಾಂಕ:20.10.2022 ಹಾಗೂ ದಿನಾಂಕ:05.11.2022ರಂದು ನಡೆದ ಸಭೆಗಳಲ್ಲಿ ವಿಷಯವನ್ನು ಮುಂದೂಡಿದ್ದ ಹಿನ್ನೆಲೆಯಲ್ಲಿ, ಮತ್ತೊಮ್ಮೆ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

# DRAFT STATUTES RELATING TO THE ESTABLISHMENT OF THE PLANNING, MONITORING AND EVALUATION BOARD

## 1. TITLE:

These Statutes shall be called "Establishment of Planning, Monitoring and Evaluation Board (Constitution, Functions and Responsibilities) of the University of Mysore, 2022.

## 2. COMMENCEMENT:

These Statutes shall come into force with effect from the date of assent of the Chancellor.

## 3. DEFINITIONS:

In this Statute, unless the context otherwise requires:

i. 'ACT' means the Karnataka State Universities Act, 2000;
ii. 'COLLEGE' means either an institution maintained by the University as a Constituent College or an Affiliated College;
iii. 'DEPARTMENT' means the Department of Studies established and maintained by the University for Post-Graduate teaching and research;
iv. 'INSTITUTE' means a Post-Graduate department, institute, School or centre, either maintained by, or affiliated to, the University;
v. 'TEACHERS' means Professors, Associate Professors, Assistant Professors, and others imparting instructions as defined in the Act;
vi. 'SUPPORTING UNIT' means a Section/Unit established and maintained by the University Administration; and
vii. 'DATABASE' means facts and figures of the University establishment, administration, staffing pattern and student enrolment.

## 4. OBJECTIVES:

The major objectives of the Planning, Monitoring and Evaluation Board are to suggest and assist the University authorities in the following matters;

i) To plan for the academic and research programmes, inter/multi-disciplinary courses/activities, Interaction with outside agencies for training, extension and research and to monitor, from time to time, the implementation of programmes and activities formulated by it;
ii) To create, analyze and disseminate the data bases of the University pertaining to its administrative branches, academic sections, research institutes, supportive units, staff and students for appropriate decision-making;

iii) To arrange for the mobilization of resources required for different purposes through proper interaction and Memorandum of Understanding (MoU) with the funding agencies- national, international and other institutions;

iv) To evolve and draft the policies and procedures of the University through periodic meetings and detailed analysis of facts and figures;

v) To facilitate with the Departments of Studies/institutes in the University and its supportive units in carrying out common action plans and also in improving the infrastructure.

**5. COMPOSITION OF THE PLANNING, MONITORING AND EVALUATION BOARD:**

The composition of PMEB shall be as per Section 35(1) of the KSU Act, 2000;

**6. FUNCTIONS AND PERIODICITY OF MEETINGS:**

(1) The PMEB shall meet at least once in three months in order to:

i. plan the academic and research programmes, inter/multi-disciplinary courses, interaction with outside agencies for training, extension of research and to monitor the implementation of programmes and activities formulated by it from time to time;

ii. discuss the academic/administrative issues of the University which need thorough analysis and evaluation in realization of the objectives of the Board;

iii. take stock of the situation of the University with reference to calendar of events, fee structure, policies on institutional overhead, students counseling, publications, Study Chairs and campus development and such other subjects proposed by the Vice-Chancellor or the Syndicate to further consider the proposals of various developmental activities for implementation;

iv. suggest the ways and means of improving the academic standards from admission to examination, appointment to retirement and financial checks and balances.

(2) The Meeting Notice shall be sent fifteen days in advance to all the members concerned with the proposed agenda and other related materials for discussion.

(3) Depending upon the need, Special Meetings may be convened at any time on the directions of the Vice-Chancellor.

**7. MEETING PROCEDURES:**

The order of business for any regular/meeting of the Planning, Monitoring and Evaluation Board shall be in accordance with the agenda prepared for the meeting. The agenda shall be provided with supportive documents to the members for their deliberations and suggestions. In addition, the following information shall also be provided to the members:

i. Matters brought forward and presented by the individual members with the permission of the Chairman.
ii. Announcements and notifications of the University which provide some input to the decision making activities of the Board.
iii. Whenever a matter before the Board is deferred, the Chairman may assign the matter to an appropriate Officer/Committee/Sub-Committee advising to bring the matter for further consideration at a future meeting of the Board or take other appropriate action and may otherwise direct the Director to attend to the matter.
iv. The Director of the PMEB shall maintain the documents/minutes of meetings.

**8. MINUTES OF MEETING OF THE PLANNING, MONITORING AND EVALUATION BOARD:**

The minutes of all meetings of the Board shall be maintained. The Board may incorporate by reference into its minutes, lists of faculty and staff changes, reports, lists of budget transfers, formal written resolutions, MoUs and other documents shall be maintained by 'Planning, Monitoring and Evaluation Board'.

Each member or the Board shall be furnished with copies of the minutes of the regular and special meetings of the Board. Members of the Board shall be furnished with copies of the minutes of the previous meeting

**9. COMMITTEES AND SUB-COMMITTEES:**

The Board may establish and maintain Standing Committees if necessary, consisting of a few members of the Board with the other faculty members of the University nominated by the Chairman of the Board in order to evaluate certain proposals and provide proper suggestions for decision-making.

**10. SUGGESTIONS AND RECOMMENDATIONS OF THE BOARD:**

The Proceedings of the Meetings of PMEB shall be considered by the authorities concerned for decision-making. Minutes of the meetings of the Board shall be placed before the Academic Council and the Syndicate for consideration and taking action thereon.

**11. STAFF:**

The Board shall have the following staffing pattern to be derived from the existing staff of the University for functioning exclusively for the purpose of Planning, Monitoring and Evaluation Board and have its office located within the University's administrative building.

1. Director
2. Deputy Director/Deputy Registrar/Special Officer
3. Superintendent

4. Clerks (two)
5. Stenographer (English and Kannada)
6. Computer Operator (English & Kannada)
7. Office Assistant
8. Peons (two)
9. Driver

**12. FINANCE:**

i. The expenditure incurred for the initial establishment and conducting the routine business of the Planning, Monitoring and Evaluation Board shall be met by the University out of its own internal resources.

ii. There shall be no financial commitment either from State Government or from any other agency for the appointment of the staff as they are placed on deputation basis from the University itself.

iii. The members of the PMEB shall be entitled to the sitting fee, TA and DA as per the University norms.

**13. MISCELLANEOUS:**

Any other planning activity of the University, which is not mentioned in any of the above-stated Statutes may also be attended to as directed by the Vice-Chancellor.

----------- 0 ----------

Subject No. 2023/2.21

Wiztoonz Academy of Media & Design, ಎಂ.ಐ.ಟಿ. ಕ್ಯಾಂಪಸ್, 2ನೇ ಮಹಡಿ, ಪಿ.ಜಿ. ಬ್ಲಾಕ್, ಬೆಳವಾಡಿ, ಶ್ರೀರಂಗಪಟ್ಟಣ ತಾ:., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Sc. (Hons.) (Multimedia) ಮತ್ತು M.Sc. (Multimedia Design) ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ-**ಅನುಸಮರ್ಥನೆಗಾಗಿ**

*****

Wiztoonz Academy of Media & Design, ಎಂ.ಐ.ಟಿ. ಕ್ಯಾಂಪಸ್, 2ನೇ ಮಹಡಿ, ಪಿ.ಜಿ. ಬ್ಲಾಕ್, ಬೆಳವಾಡಿ, ಶ್ರೀರಂಗಪಟ್ಟಣ ತಾ:., ಮಂಡ್ಯ ಜಿಲ್ಲೆ, ಇವರು ವಿಶ್ವವಿದ್ಯಾನಿಲಯದ Specialized Programme ಅಡಿಯಲ್ಲಿ ಹೊಸದಾಗಿ B.Sc. (Hons.) (Multimedia) ಮತ್ತು M.Sc. (Multimedia Design) ಎಂಬ ಕೋರ್ಸ್‌ಗಳಿಗೆ ಮಾನ್ಯತೆ ನೀಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು.

ಮೇಲ್ಕಂಡ ಮನವಿಯ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಈ ಸಂಸ್ಥೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ಪರಿಶೀಲನೆಗಾಗಿ ವಿಶ್ವವಿದ್ಯಾನಿಲಯದ ತಜ್ಞರನ್ನು ಒಳಗೊಂಡ ಪರಿವೀಕ್ಷಣಾ ಸಮಿತಿಯನ್ನು ರಚಿಸಲಾಗಿತ್ತು. ತದನಂತರ ದಿನಾಂಕ 03-02-2023ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನುಸಾರ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸದರಿ ಸಮಿತಿಯನ್ನು ಪುನರ್ ರಚಿಸಲಾಗಿತ್ತು.

| | | |
|---|---|---|
| 1 | Prof. H.S. Nagendraswamy<br>DoS in Computer Science, Manasagangotri, Mysuru. | Chairman |
| 2 | Prof. J. Hanumanthappa<br>DoS in Computer Science, Manasagangotri, Mysuru. | Member |
| 3 | Prof. M.S. Sapna<br>DoS in Journalism and Mass Communication, MGM. | Member |
| 4 | Dr. Chaitra Narayana<br>Syndicate Member, University of Mysore, Mysuru. | Member |
| 5 | Prof. N.K. Lokanath<br>Director, P.M.E.B., UOM, Mysuru. | Member Convener |

ಈ ಸಮಿತಿಯು ದಿನಾಂಕ 27-02-2023ರಂದು Wiztoonz Academy of Media & Design, ಎಂ.ಐ.ಟಿ. ಕ್ಯಾಂಪಸ್, 2ನೇ ಮಹಡಿ, ಪಿ.ಜಿ. ಬ್ಲಾಕ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಸಮಿತಿಯ ಶಿಫಾರಸ್ಸು ಈ ಮುಂದಿನಂತಿರುತ್ತದೆ.

"The Expert Committee recommends the granting of recognition for Specialized Programme in **B.Sc. (Hons.)(Multimedia) and M.Sc. (Multimedia Design) - with an intake of 40 each** to **Wiztoonz Academy of Media & Design**, MIT Campus, 2nd Floor, PG Block, Belawadi, Srirangapatna Tq., Mandya-571 438, under the provision of "The University of Mysore-Recognition of Certain institutions for specified studies/ specialized and Research Statutes 2008" from the academic year 2023-24".

ಮೇಲಿನ ಪರಿವೀಕ್ಷಣಾ ಸಮಿತಿಯ ವರದಿಯನುಸಾರ ಮತ್ತು "The University of Mysore-Recognition of Certain Institutions for Specified Studies/Specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಹಾಗೂ ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, Wiztoonz Academy of Media & Design, MIT ಕ್ಯಾಂಪಸ್, 2ನೇ ಮಹಡಿ, ಪಿ.ಜಿ. ಬ್ಲಾಕ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಸಂಸ್ಥೆಗೆ Specialized Programme ಅಡಿಯಲ್ಲಿ ಹೊಸದಾಗಿ B.Sc. (Hons.) (Multimedia) ಮತ್ತು M.Sc. (Multimedia Design) ಎಂಬ 02 ಹೊಸ ಕೋರ್ಸ್‌ಗಳನ್ನು 2023-24ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ ಅಧಿಸೂಚನೆಯನ್ನು (ಸಂಖ್ಯೆ: PMEB-1/Spl./29/2022-23) ದಿನಾಂಕ 09-03-2023ರಂದು ಹೊರಡಿಸಲಾಗಿದೆ.

ಮೇಲ್ಕಂಡ ಅಧಿಸೂಚನೆಯನ್ನು ಹೊರಡಿಸುವ ಸಂಬಂಧ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.